**<u>ಸಾಕ್ಷಿಯನ್ನು ದಿಃ08.09.2022 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿ <u>ವಾದಿ ಪರ ಶ್ರೀ. ಎ ಆರ್ ಆರ್ ವಕೀಲರಿಂದ.</u>**

ನನ್ನ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನನ್ನ ಪ್ರಮಾಣಪತ್ರದಲ್ಲಿ ಬರೆದಿರುವ ಮಾಹಿತಿಗಳು ನನಗೆ ಗೊತ್ತಿಲ್ಲ. ವಾದಿಯ ಗಂಡನ ಅಣ್ಣನ ಹೆಸರು ದೊಡ್ಡತಮ್ಮಯ್ಯ ಎಂದು ಇರುತ್ತದೆ. ರಾಮಚಂದ್ರಯ್ಯ ಮತ್ತು ದೊಡ್ಡತಮ್ಮಯ್ಯ ಸಹೋದರರು ಇರುತ್ತಾರೆ. ದಾವಾಆಸ್ತಿ ಸದರಿಯವರ ತಂದೆಗೆ ಸೇರಿದ ಆಸ್ತಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾಆಸ್ತಿಯ ಚೆಕ್ಕುಬಂದಿ ಮತ್ತು ವಿಸ್ತೀರ್ಣ ಮತ್ತು ನಂಬರ್ ನನಗೆ ಗೊತ್ತಿಲ್ಲ. ದಾವಾಆಸ್ತಿಯ ಸಲುವಾಗಿ ಈ ಹಿಂದೆ ಕೇಸು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಆಸ್ತಿಯು ಮೂಲತಃ ರಾಮಯ್ಯ ಬಿನ್ ಯಾಮಗಿರಯ್ಯ ರವರಿಗೆ ಸೇರಿದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನಂತರ ಅವರ ಮಕ್ಕಳಾದ ರಾಮಚಂದ್ರಯ್ಯ ಮತ್ತು ದೊಡ್ಡತಮ್ಮಯ್ಯ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಅದು ಮಲ್ಲೇಶ್ ರವರ ಮನೆ ಎಂದರೆ ಸಾಕ್ಷಿ ಅದನ್ನು ಒಪ್ಪಿಕೊಂಡಿರುವುದಿಲ್ಲ.

ಮಲ್ಲೇಶ್ ರವರ ತಂದೆ ಹೆಸರು ಶಿವರಾಮಯ್ಯ ಎಂದುಇರುತ್ತದೆ. ಈಗ ಅವರು ಮರಣ ಹೊಂದಿರುತ್ತಾರೆ. ಕೆಂಪಮ್ಮ ಮತ್ತು ಮಲ್ಲೇಶ್ ರವರು ಶಿವರಾಮಯ್ಯ ರವರ ಮಕ್ಕಳು ಇರುತ್ತಾರೆ ಎಂದರೆ ಸರಿ. ವಾದಿಯ ಗಂಡ ಶಿವರಾಮಯ್ಯ ರವರಿಗೆ ದಿಃ 27.04.1981 ರಲ್ಲಿ 35x45 ಅಡಿ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆ ಸುಮಾರು 35 ವರ್ಷದ ಹಳೆ ಮನೆ ಆಗಿದ್ದು ಅದು ವಾದಿಯ ಮನೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ವಾದಿಯಿಂದ ಯಾವುದೇ ಆಸ್ತಿ ಖರೀದಿ ಮಾಡಿರುವುದಿಲ್ಲ. ನಾನು ವಾದಿಯಿಂದ ಆಸ್ತಿಯನ್ನು ಖರೀದಿ ಮಾಡಿದ್ದು ಅದನ್ನು ನೊಂದಣಿ ಮಾಡಿಸಿಕೊಳ್ಳಲು ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವರಾಮಯ್ಯರವರು 2011 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿ ಮನೆಯನ್ನು ಶಿವರಾಮಯ್ಯರವರು ಪಂಚಾಯತಿಯಿಂದ ಪರವಾನಗಿ ಪಡೆದು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕ್ರಯಪತ್ರದ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಗಂಡ 2 ನೇ ಪ್ರತಿವಾದಿಯ ತಂದೆಗೆ ಕ್ರಯಪತ್ರ ಮಾಡಿಕೊಟ್ಟಿದ್ದರಿಂದ ವಾದಿಗೆ ದಾವಾಆಸ್ತಿಯಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಆಸ್ತಿಯಲ್ಲಿ ಪುನಃ ರಾಜಿ ಅರ್ಜಿ ಹೂಡಿ ಡಿಕ್ರಿ ಮಾಡಿಕೊಳ್ಳುವ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕೇಸಿನಲ್ಲಿ ಪ್ರತಿವಾದಿ ರವರು ಪಕ್ಷಗಾರರಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

ದಾವಾಆಸ್ತಿಯಲ್ಲಿ ವಾದಿಯು ಮಾಲೀಕರು ಅಥವಾ ಸ್ವಾಧೀನತೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿರವರೇ ಸ್ವಾಧೀನದಲ್ಲಿದ್ದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಆಸ್ತಿಯ ದಾಖಲಾತಿಗಳನ್ನು ನೋಡಿರುವುದಿಲ್ಲ. ದಾವಾಆಸ್ತಿಯ ಅಕ್ಕಪಕ್ಕದಲ್ಲಿ ನನ್ನ ಆಸ್ತಿ ಇರುವುದಿಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.